


ಡಾ.ಜಿ. ಕೃಷ್ಣಪ್ಪ

# ಪೂರ್ವ ಜನ್ಮಾಂತರದ ಫಲವದನರಿಯೆ ಬಂದುದು ಕಾಲಗತಿ ನೃಪಗೆ

ರಾಜನು ಅರಮನೆಯಲ್ಲಿ ಪ್ರತಿದಿನವು ಮುನಿ ಶ್ರೇಷ್ಠರನ್ನು, ಬ್ರಾಹ್ಮಣರನ್ನು ಸತ್ಕರಿಸುತ್ತಿದ್ದನು. ಜಪತಪ ಹೋಮ ಯಜ್ಞಾದಿಗಳನ್ನು ಮಾಡುತ್ತ ದೇವತೆಗಳ ಸಂತರ್ಪಣೆಯಲ್ಲಿರುತ್ತಿದ್ದನು. ಹಾಗಿದ್ದರೂ ಅವನ ಪೂರ್ವಜನ್ಮದ ಕರ್ಮಫಲವಾಗಿ ಕೆಟ್ಟಕಾಲ ಬಂದಿತು.

ನಳನು ಒಂದು ದಿವಸ ಆಚಮನ ಕಾಲ (ಆತ್ಮ ಶುದ್ಧಿಗೋಸ್ಕರ ಅಂಗೈಗುಳಿಯಲ್ಲಿ ಶುದ್ಧೋದಕವನ್ನು ಮಂತ್ರಪೂರ್ವಕವಾಗಿ ಕುಡಿಯುವುದು) ದಲ್ಲಿ ಶುದ್ಧಾಚಮನವನ್ನು ಮಾಡದೆ, ಅಲ್ಪಾಚಮನವನ್ನು ಮಾಡಿದನು. ನಿಂತು ನೀರು ಕುಡಿದನು. ಅದನ್ನು ಕಲಿಪುರುಷನು ನೋಡಿದನು. ನಳನನ್ನು ಕಾಡಿಸಲು ಅದೇ ಒಳ್ಳೆಯ ಸಮಯವೆಂದು ಬಗೆದನು.

ಧರ್ಮರಾಜನೇ ಕೇಳು. ವಿಧಿನಿಯಮವನ್ನು ತಪ್ಪಿಸಲು ಯಾರಿಗೆ ಸಾಧ್ಯ ಎಂದು ರೋಮಶ ಮುನಿಗಳು ಕಥೆ ಹೇಳಿದರು.

ನಿಷ್ಕಪಟ ನಳನೃಪನನ್ನು ಹಾಳು ಮಾಡಲು ಕಲಿಯು ಕಪಟ ಬ್ರಾಹ್ಮಣ ವೇಷ ಧರಿಸಿ, ಒಂದು ಉಪಾಯವನ್ನು ಆಲೋಚಿಸಿದನು. ಅದನ್ನು

